Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

Volume 39 Issue - 38 13th March 2025

## "WOMEN EMPOWERMENT"

## "ಮಹಿಳಾ ಸಬಲೀಕರಣ"

Guest :

**Mrs. Vrinda Lewis,**
Director, M/s. Klauz Specialities, Bangalore

Time : 7.00 p.m.
Venue : Hotel Shivaprasad Grand, Kundapura

39th year of Service and Fellowship

# ವಾರದ ವರದಿ




ಕಳೆದ ವಾರದ ಸಭೆಯು 07–03–2025ನೇ ಗುರುವಾರದಂದು ಹೋಟೇಲ್ ಶಿವಪ್ರಸಾದ್ ಗ್ರ್ಯಾಂಡ್‌ನ ಸಭಾಂಗಣದಲ್ಲಿ ನಡೆಯಿತು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯೊಂದಿಗೆ ಸಭೆ ಆರಂಭಗೊಂಡಿತು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಕಳೆದ ವಾರದ ವರದಿಯನ್ನು ಸಭೆಗೆ ನೀಡಿದರು. ರೊ. ವಿವಿಯನ್ ಕ್ರಾಸ್ತೋರವರು ವಾರದ ಚಿಂತನೆಯಲ್ಲಿ ಗೆಳೆಯರ ಗೆಳೆತನದ ಮಹತ್ವವನ್ನು ಸಭೆಗೆ ತಿಳಿಸುತ್ತಾ, ಕಷ್ಟ ಕಾಲದಲ್ಲಿ ಸಹಾಯ ಮಾಡುವಂತಹ ಉತ್ತಮ ಗೆಳೆಯರನ್ನು ಯಾವತ್ತೂ ಸ್ನೇಹಿತರಾಗಿ ಉಳಿಸಿಕೊಳ್ಳಬೇಕೆಂದರು. ರೊ. ವಾಸುದೇವ ಕಾರಂತರು ರೋಟರಿ ಮಾಹಿತಿಯನ್ನು ನೀಡುತ್ತಾ, ರೋಟರಿ ಫೌಂಡೇಶನ್ ನೀಡುವ ವಿವಿಧ ಗ್ರ್ಯಾಂಟ್‌ಗಳ ಬಗ್ಗೆ ತಿಳಿಸಿದರು. ಕಳೆದ ಮೂರು ವರ್ಷಗಳ ಹಿಂದೆ ರೊ. ಮಹೇಂದ್ರ ಶೆಟ್ರ ಅವಧಿಯಲ್ಲಿ ಅವರು ನೀಡಿದ ದೇಣಿಗೆಯಲ್ಲಿ ಸುಮಾರು 50% ದೇಣಿಗೆ ನಮ್ಮ ಕ್ಲಬ್ಬಿಗೆ ಡಿಸ್ಟ್ರಿಕ್ಟ್ ಗ್ರ್ಯಾಂಟ್ ಆಗಿ ವಾಪಾಸು ಬಂದಿರುವುದರಿಂದ ಆ ಮೊತ್ತವನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಕುಂದಾಪುರ ಸಂಚಾರಿ ಪೊಲೀಸ್ ಠಾಣೆಯ ಕೋರಿಕೆಯ ಮೇರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ 3 ಸಿಸಿ ಟಿವಿ ಅಳವಡಿಕೆಗಾಗಿ ನಮ್ಮ ಕ್ಲಬ್ಬಿನಿಂದ ಉಪಯೋಗಿಸಿದ್ದು, ಅದು ಸಮಾಜಕ್ಕಾಗಿ ಒಳ್ಳೆಯ ರೀತಿಯಲ್ಲಿ ಸದ್ವಿನಿಯೋಗವಾಗಿದೆ ಎಂದು ಶ್ಲಾಘಿಸಿದರು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ತಾವು ಇತ್ತೀಚೆಗೆ ಕಾರಣಾಂತರದಿಂದ ಕುಂದಾಪುರ ಸಂಚಾರಿ ಪೊಲೀಸ್ ಠಾಣೆಗೆ ಭೇಟಿ ನೀಡಿದಂತ ಸಂದರ್ಭದಲ್ಲಿ ಠಾಣಾಧಿಕಾರಿಗಳು ನಿಮ್ಮ ಕೊಡುಗೆಯಾದ ಸಿಸಿಟಿವಿಯಿಂದ ನಮಗೆ ತುಂಬಾ ಪ್ರಯೋಜನವಾಗುತ್ತಿದೆ ಎಂದು ನೀಡಿದ Positive Feedbackನಿಂದಾಗಿ ತುಂಬಾ ಖುಷಿಯಾಯಿತು ಎಂದು ಸಭೆಗೆ ತಿಳಿಸಿದರು. ಹಾಗೂ ಇದಕ್ಕಾಗಿ ಸಹಕರಿಸಿದ ರೊ. ವಾಸುದೇವ ಕಾರಂತರಿಗೆ ಹಾಗೂ ರೊ. ಸತ್ಯನಾರಾಯಣ ಪುರಾಣಿಕರಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ತದ ನಂತರ 144 ವರ್ಷಗಳಿಗೊಮ್ಮೆ ಪ್ರಯಾಗ್ ರಾಜ್‌ನಲ್ಲಿ ಈ ವರ್ಷ ನಡೆದ ಮಹಾಕುಂಭ ಮೇಳದಲ್ಲಿ ಭಾಗಿಯಾಗಿ ಪಾವನರಾದ ನಮ್ಮ ಕ್ಲಬ್ಬಿನ ಸದಸ್ಯರು ತಮ್ಮ ಅನುಭವಗಳನ್ನು ಈ ಸಭೆಯಲ್ಲಿ ಹಂಚಿಕೊಂಡರು.

**ರೊ. ಸಚಿನ್ ನಕ್ಕತ್ತಾಯ :** ರೋಟರಿ ಕುಂದಾಪುರ ದಕ್ಷಿಣದ ಸದಸ್ಯರಾದ ರೊ. ಸಚಿನ್ ನಕ್ಕತ್ತಾಯ, ರೊ.ಸತ್ಯನಾರಾಯಣ ಪುರಾಣಿಕ್, ರೊ. ಸುಪ್ರೀತ್ ಚಾತ್ರ ದಂಪತಿಗಳು ಸೇರಿ 13 ಮಂದಿ ಮಹಾಕುಂಭಮೇಳಕ್ಕೆ ತೆರಳಿದ್ದರು. 20 ಕಿ.ಮೀ ಆಟೋದಲ್ಲಿ, ಮೂರು ಮೂರು ಮಂದಿ ಬೈಕಿನಲ್ಲಿ ತೆರಳಿದ್ದು ರೋಚಕವಾಗಿತ್ತು. ಅಲ್ಲಿನ ಸುಂದರವಾದ ರಸ್ತೆಗಳು, ಆರ್ ಎಸ್ ಎಸ್‌ನವರ ಸೇವೆ, ಸ್ವಚ್ಚ ನಗರಿಯನ್ನು ಶ್ಲಾಘಿಸಿದರು. ಪ್ರವಾಸಕ್ಕೆ ಅಂದಾಜು ಒಬ್ಬರಿಗೆ 60ರಿಂದ 63,000/– ರೂ. ಗಳ ವೆಚ್ಚವಾಯಿತು.

**ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ :** ಭಾರತದ ಅರ್ಧ ಜನಸಂಖ್ಯೆ ಭಾಗಿಯಾಗುವ ಕುಂಭಮೇಳದಲ್ಲಿ ತಾನೊಬ್ಬನಾಗುವ ಮಹದಾಸೆಯೊಂದಿಗೆವಾರಣಾಸಿಗೆ ತೆರಳಿದರು. ಚಪ್ಪಡಿ ಹಾಕಿದ ಗಲ್ಲಿಯಲ್ಲಿ 3 ಕಿ.ಮೀ. ಕಾಲ್ನಡಿಗೆ, ಪ್ರಯಾಗ್‌ರಾಜ್ ತಲುಪಬೇಕಾದ ಟ್ಯಾಕ್ಸಿ ಬಳಿ ತಲುಪಲು 6 ಕಿ.ಮೀ. ನಡೆಯಬೇಕಾಯಿತು. ನಮ್ಮ ದೈಹಿಕ ಕ್ಷಮತೆಯನ್ನು ಪರೀಕ್ಷಿಸಲು ಒಮ್ಮೆ ಇಂತಹ ಸ್ಥಳಕ್ಕೆ ಭೇಟಿ ನೀಡಬೇಕು ಎಂದರು. 4 ದಿನದ ಪ್ರವಾಸಕ್ಕೆ ಅಂದಾಜು ರೂ. 51,000/–ಗಳ ವೆಚ್ಚವಾಯಿತು.

**ರೊ. ಡಾ. ರಾಜೇಶ್ ಬಾಯರಿ :** 7 ಮಂದಿ ವೈದ್ಯಮಿತ್ರರೊಂದಿಗೆ ಅಯೋಧ್ಯೆಗೆ ಪ್ರಯಾಣ ಬೆಳೆಸಿ, ಆರ್‌ಎಸ್‌ಎಸ್ ಮುಖಂಡ ಗೋಪಾಲ್‌ಜೀ ಅವರ VIP ಪಾಸ್ ಮೂಲಕ ಶ್ರೀ ರಾಮನ ದರ್ಶನವಾಯಿತು. ಎಲ್ಲೂ ಏನೂ ತೊಂದರೆಯಾಗದೆ ಸಲೀಸಾಗಿ ಕುಂಭಮೇಳದ ಟೆಂಟ್ ಬಳಿ ಕಾರಲ್ಲಿ ತಲುಪಿದರು. ಮರುದಿನ ಸಣ್ಣ ಅಗ್ನಿ ಅವಘಡ ಸಂಭವಿಸಿದ್ದರಿಂದ ಹೊರಗಡೆ ಪ್ರವೇಶ ನಿಷೇಧವಾಗಿತ್ತು. ಪರಿಸರದ ಸ್ವಚ್ಚತೆ, ಶುಭ್ರತೆ ಪ್ರಶಂಸನೀಯ. 6 ದಿನಗಳ ಪ್ರವಾಸಕ್ಕೆ ಅಂದಾಜು ರೂ. 50,500/– ಖರ್ಚಾಯಿತು.

**ರೊ. ಡಾ. ವಿಶ್ವೇಶ್ವರ ಭಟ್ :** ಪತ್ನಿ, ರೋ. ಸೀತಾರಾಮ ನಕ್ಕತ್ತಾಯ ದಂಪತಿ ಸೇರಿ 10 ಮಂದಿ ಪ್ರಯಾಣ ಬೆಳೆಸಿದರು. ಬೆಂಗಳೂರು ವಿಮಾನ ನಿಲ್ದಾಣದ ಸುಂದರವಾದ 2nd Terminal ನೋಡಲು ಅವಕಾಶ ದೊರೆಯಿತು. ಪ್ರಯಾಣ ಸ್ವಲ್ಪ ಪ್ರಯಾಸದಾಯಕವಾಗಿದ್ದು, ಅತಿ ದೊಡ್ಡ ಟ್ರಾಫಿಕ್ ಜಾಮ್‌ನಲ್ಲಿ

ಹಲವು ಗಂಟೆಗಳ ಕಾಲ ಸಿಲುಕಿದ್ದರು. ಕಾರಿನ ಚಾಲಕನಿಗೆ ಸುಸ್ತಾದಾಗ ತಾವೇ ಸ್ವತಃ ಕಾರನ್ನು ಚಲಾಯಿಸಿದ ಅನುಭವವನ್ನು ಹಂಚಿಕೊಂಡರು.

**ರೊ. ಸತ್ಯನಾರಾಯಣ ಪುರಾಣಿಕ್ :** 650 ಕಿ.ಮೀ. ರಸ್ತೆಯನ್ನು ಕಬ್ಬಿಣದ ಶೀಟ್ ಹಾಸಿ, ಪ್ರಯಾಣಕ್ಕೆ ಅನುಕೂಲವನ್ನು ಮಾಡಿದ್ದರು. 30 fountain bridgeನ್ನು ತಾತ್ಕಾಲಿಕವಾಗಿ ನಿರ್ಮಿಸಿ, ಅದರಲ್ಲಿ one way ಮಾಡಿ ಸುವ್ಯವಸ್ಥಿತವಾಗಿ ರಸ್ತೆ ಸಂಚಾರದ ವ್ಯವಸ್ಥೆಯಿತ್ತು. ಎಲ್ಲಾ ಕಡೆ ಪೋಲೀಸರಿದ್ದರೂ ಯಾರೊಬ್ಬರ ಕೈಯಲ್ಲಿಯೂ ಲಾಠಿ ಇಲ್ಲದಿದ್ದದ್ದು ವಿಶೇಷ. ಎಲ್ಲಾ ಕಡೆ ಸ್ವಯಂ ಸೇವಕರು ಸೇವೆಗೆ ಸಿದ್ದರಾಗಿರುತ್ತಿದ್ದರು. ಸ್ವಚ್ಛತಾ ಸಿಬ್ಬಂದಿಗಳು ಅವಿರತವಾಗಿ ದುಡಿಯುತ್ತಿದ್ದುದರಿಂದ ಕೋಟಿಗಟ್ಟಲೆ ಜನ ಸೇರಿದರೂ, ಸ್ವಚ್ಛತೆಯನ್ನು ಅಷ್ಟು ಚೆನ್ನಾಗಿ ನಿರ್ವಹಿಸಿಕೊಳ್ಳಲಾಯಿತು. ತಂತ್ರಜ್ಞಾನವನ್ನು ಎಲ್ಲಾ ರೀತಿಯಿಂದ ಉಪಯೋಗಿಸಿಕೊಂಡು ಸಿಸಿ ಟಿವಿ, ಕಂಟ್ರೋಲ್ ರೂಮ್, Khoya - Paya ಕೌಂಟರ್ ಇದ್ದು, ಯಾರೊಬ್ಬರೂ ಕಳೆದು ಹೋದರೂ ಅವರ ಮನೆಯವರನ್ನು ತಲುಪಲು ಸಾಧ್ಯವಾಗಿತ್ತು. ಇಂತಹ ಅದ್ಭುತ ವ್ಯವಸ್ಥೆಯನ್ನು ಮಾಡಿದ ಉತ್ತರಪ್ರದೇಶ ರಾಜ್ಯ ಸರ್ಕಾರಕ್ಕೆ ನಮ್ಮ ಸಲಾಮ್.

ರೊ. ಕೆ. ಕೆ. ಕಾಂಚನರು ನಗೆಚಟಾಕಿಯನ್ನಿತ್ತರು. ರೊ. ವಾಸುದೇವ ಕಾರಂತರು ಲಕ್ಕಿ ರೋಟೇರಿಯನ್ನಾಗಿ ಮೂಡಿಬಂದರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿ ಧನ್ಯವಾದ ಸಮರ್ಪಣೆಗೈದರು. ಕುಂಭಮೇಳದ ಅನುಭವ ಕಥನವನ್ನು ಸವಿಯುತ್ತಾ ರಾಷ್ಟ್ರಗೀತೆಯೊಂದಿಗೆ ಸಭೆ ಸಂಪನ್ನಗೊಂಡಿತು.

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 14-03-2025ನೇ ಶುಕ್ರವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಸುಹಾಸ್ ಭಂಡಾರ್‌ಕರ್ ಮತ್ತು ಆ್ಯನ್ ನಿವೇದಿತಾ ಇವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 91087 50011



ತಾ. 18-03-2025ನೇ ಮಂಗಳವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ದೇವರಾಜ್ ಕೆ. ಮತ್ತು ಆ್ಯನ್ ಸವಿತಾ ಇವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9731084055




## Rotary Information

Types of Grants offered by the Rotary Foundation

1) District Grant, 2) Global Grant, 3) Rotary Disaster Response Grant and Progams of Scale Grant .

Amount of District Grant available depends upon how much the club's have remitted to TRF .

**By Rtn. Vasudev Karanth**

## ಕಳೆದ ವಾರದ ಚಿಂತನೆ

ಸ್ನೇಹಿತರನ್ನು ಶತ್ರುಗಳನ್ನಾಗಿ ಮಾಡಿಕೊಳ್ಳುವುದು ಕಷ್ಟದ ಕೆಲಸವಲ್ಲ. ಹಾಗೆಯೇ ಒಳ್ಳೆಯ ಸ್ನೇಹಿತರನ್ನು ಗಳಿಸಿಕೊಳ್ಳುವುದು ಸುಲಭದ ಕೆಲಸವೂ ಅಲ್ಲ. ಒಳ್ಳೆಯ ಗೆಳೆಯರನ್ನು ಪಡೆಯಬೇಕಾದರೆ ನಾವೂ ಒಳ್ಳೆಯ ಗೆಳೆಯರಾಗಬೇಕಾಗುತ್ತದೆ. ಆದುದರಿಂದ ಕಷ್ಟಕಾಲದಲ್ಲಿ ಸ್ನೇಹಿತರಿಗೆ ಸಹಾಯ, ಸಹಕಾರಗಳನ್ನು ನೀಡಿ ಗೆಳೆತನವನ್ನು ಉಳಿಸಿ ಗಟ್ಟಿಗೊಳಿಸುವುದೇ ಜಾಣತನ. ನೀಡಿದವರು – ರೊ.. ವಿವಿಯನ್ ಕ್ರಾಸ್ಟೋ

